"SATYAVADI" Founded 1917 Regd. No. M. 1299

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದ್ದು)

ಸಂಪುಟ 29 ಸಂಚಿಕೆ 15] ಶನಿವಾರ 29—9—45 [ಬಿಡಿ ಪ್ರತಿ 3 ಪೈ

ಶ್ರೀ ಶಿವಾಜಿಯ

ಮೇಲಿನ ಆಕ್ಷೇಪಣೆ ವ್ಯಾಜ್ಯ

ಜೌಹರ್‌ಪುರದ ಪ್ಲೀಡರ್ ಎಸ್. ಟಿ ದಾವೂದ್ ಸೈಯದ್ ಖಾನ್ ಎಂಬಾತನು 'ರಾಜಾ ಶಿವಾಜಿ' ಎಂಬ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದ್ದಾನೆ. ಅದರಲ್ಲಿ ಆತನು ಶ್ರೀ ಶಿವಾಜಿ ಮಹಾರಾಜನನ್ನು ಮತ್ತು ಆತನ ಮಾತೃಶ್ರೀಯರಾದ ಜೀಜಾಬಾಯಿಯವರನ್ನೂ ಮನಬಂದಂತೆ ದೂಷಿಸಿದ್ದಾನೆ. ಆ ದೋಷಾರೋಪಣೆಗಳು ಹೀಗಿವೆ —

ಶಿವಾಜಿಯು ಒಬ್ಬ ದರೋಡೆಜೋರ ಒಬ್ಬ ಕಳ್ಳ, ಒಬ್ಬ ಸಾಧಾರಣ ಜೋರ. ಒಂದು ನಾಯಿ : ಇಷ್ಟಕ್ಕೇ ಸಿಲ್ಲಿಸದೆ ಶ್ರೀ ಜೀಜಿ ತಾಯಿಯವರಿಗೆ ಒಬ್ಬ ಪೋರ್ಚುಗೀಸನ ಸಂಬಂಧವಿತ್ತೆಂದೂ ಮತ್ತು ಈಕೆಯನ್ನು ಶ್ರೀ ಶಿವಾಜಿಯೇ ಅಪಜ್ಞುಲಖಾನನ್ನು ಕುಪಚುಸಲಿಕ್ಕೆಂದು ಅವನ ಬಿಡಾರಕ್ಕೆ ಕಳಹಿಸಿದ್ದನೆಂದೂ ಅಲ್ಲಿ ಆಕೆಯು ಒಂದು ರಾತ್ರಿಯನ್ನು ಕಳೆದಳೆಂದು ಆ ಪತಿವ್ರತಾ ಶಿರೋಮಣಿಯ ಮೇಲೆ ಅಕ್ಷವ್ಯವಾದ ದೋಷಾರೋಪಣೆ ಮಾಡಿದ್ದಾನೆ

ಇಷ್ಟಕ್ಕೂ ತೃಪ್ತಿಗೊಳ್ಳದೆ ಶ್ರೀ ಶಿವಾಜಿಯ ಮೂಲವನ್ನು ಕುರಿತು ಉದಯಪುರದ ಮಹಾರಾಣಾನ ಒಬ್ಬ ಅತ್ಯಂತ ಕೀಳು ಜಾತಿಯ ಸೂಯ ಮಗ ಬಾಗಸಿಂಗ್ ಎಂಬುವವನ ವಂಶಜನೆಂದು ಸಹ ಅವಹೇಳನ ಮಾಡಿದ್ದಾನೆ.

ಹಿಂದೂ ಸಮಾಜ, ಹಿಂದೂ ಧರ್ಮ, ಹಿಂದೂ ಸಂಸ್ಕೃತಿ ಇತ್ಯಾದಿಗಳನ್ನು ತನ್ನ ಶೌರ್ಯ, ಧೈರ್ಯ, ಸರಾಕ್ರಮಾದಿಗಳಿಂದ ಸಂರಕ್ಷಿಸಿ ಹಿಂದೂ ಸ್ವರಾಜ್ಯವನ್ನು ಸ್ಥಾಪಿಸಿದ ಆ ಶೂರ, ವೀರ ಶ್ರೀ ಛತ್ರಪತಿ ಶಿವಾಜಿ ಮತ್ತು ಪರಮ ಪೂಜ್ಯಳೂ ಧರ್ಮ ಪಾರಾಯಣೆಯ ಪುಣ್ಯಶ್ಲೋಕಿಯೂ ಆದ ಆತನ ಮಾತೃಶ್ರಿ ಜೀಜಾಬಾಯಿಯವರನ್ನೂ ಹೀಗೆ ದೂಷಿಸಿರುವುದು ಇಡೀ ಹಿಂದೂ ಜನಕ್ಕೇ ತುಂಬಾ ದುಃಖವೂ ಅಸಹನವಾದ ಆಗ್ರಹವೂ ಉಂಟಾಗಿದೆ.

ಇಂಥ ಧೈರ್ಯ, ಸಾಹಸಗಳು ಈತನಿಗೆ ಹೇಗೆ ಬಂದಿರಬಹುದೆಂಬ ಕಾರಣವನ್ನು ಹುಡುಕಲು ನಾವು ಬಹುದೂರ ಶ್ರಮಿಸಬೇಕಾಗಿರುವುದಿಲ್ಲ. ಹಿಂದೂ ಜನರ ಹೇಡಿತನ, ಅನೈಕವತ್ಯ, ಅಂತಃಕಲಹ ಜಾತಿದ್ವೇಷಗಳೇ ಸಹಾಯಕಗಳಿಗೆ ಗುಂಡಾಗಳ ಪುಂಡಾಟಗಳು ದಿನೇದಿನೆ ಅಭಿವೃದ್ಧಿಗೊಳ್ಳುತ್ತಿವೆ. ಇದು ಹಿಂದೂ ಜನರ ಸ್ವಯಂಕೃತಾಪರಾಧವೇ!

(4 ನೇ ಕಾಲಂ ನೋಡಿ)

ಪಾಲಿಸ್ತೈನಿಗೆ ಪ್ಯಾರಾಚೂಟ್‌ಸೇನೆ ಶಿ ಎ

ಜರೂಸೆಲಂ ಸೆ 28— ಯೂರೋಪಿನಿಂದ ಬ್ರಿಟಿಷ್ 3 ನೇ ಸೈನ್ಯದ ಒಂದು ಪ್ಯಾರಾಚೂಟ್ (ವಿಮಾನಕೊಡೆ) ದಳವು ಒಂದಿರುವುದೆಂದೂ, ಅಕ್ಕಪಕ್ಕ ದೇಶಗಳಿಂದ ಯಹೂದ್ಯರು ನ್ಯಾಯಬಾಹಿರ ರೀತಿಯಲ್ಲಿ ಪ್ರವೇಶಮಾಡದಂತೆ ತಕ್ಕ ಕಾರ್ಯಕ್ರಮ ನಡೆಸಲು ಕರೆಸಲ್ಪಟ್ಟಿರುವರೆಂದೂ ಹೇಳಲಾಗಿದೆ.

o o

ಪ್ಯೆಟ್ರೋರಿಯೊ ಸೆ 27— ಇಲ್ಲಿಯು ಯುನೈಟೆಡ್ ಪಾರ್ಟಿಯ ವಿಾಟಿಂಗಿನಲ್ಲಿ ಟ್ರಾನ್ಸ್‌ವಾಲಿನ ಮುಖಂಡರನ್ನು ಕುರಿತು ಜ॥ ಸ್ಮಟ್ಸ್‌ರು, ದ. ಅಫ್ರಿಕಾವು ಎಂದೆಂದಿಗೂ ರಾಷ್ಟ್ರೀಯ ಸರಕಾರವನ್ನು ಹೊಂದುವುದಿಲ್ಲವೆಂದರು.

o o

ಲಂಡನ್ ಸೆ 28— ರಷ್ಯಾದಲ್ಲಿ ಸ್ಟಾಲಿನ್ನರು ಅನಾರೋಗ್ಯದಿಂದಿರುವರೆಂದೂ ಯೂರೋಪು ಮತ್ತು ಪೆಸಿಫಿಕ್ ಸಮ್ಮೇಳನಗಳಾದನಂತರ ಅವರು ರಾಜೀನಾಮೆ ಕೊಡುವರೆಂದೂ, ತದನಂತರ ರಷ್ಯಾದ ಅಧಿಕಾರಕ್ಕಾಗಿ ಹೊಡೆದಾಟವಾಗುವುದೆದೂ, 'ಕ್ಯಾಥಲಿಕ್ ಹೆರಾಲ್ಡ್' ಪತ್ರಿಕೆಯು ಭವಿಷ್ಯವಾಣಿ!

o o

ಅಸ್ಸಾಂ— ಅಸ್ಸಾಂಕೂಡ ಪಾಕಿಸ್ತಾನವನ್ನು ವಿರೋಧಿಸುವುದೆಂದು ಶ್ರೀ ಬಾಡೋಲಿಯವರು ಹೇಳಿದಾರೆ.

o o

ಬೆಂಗಳೂರು, ಸೆ 27 — ಕಂಬಳ್ಳಿ ವಜ್ರಗಣಿಯವರು ಸರ್ ರಾಮಸ್ವಾಮಿಗೆ 16 ಆರಿಸಿ ತೆಗೆದ ಶ್ರೇಷ್ಠ ಆಫ್ರಿಕಾ ವಜ್ರಗಳ ಪರಿಶೋಧಿಸಲು ಕಳಿಸಿದ್ದಾರೆ.

ಮೈಸೂರು ನಿನ್ನೆಯ ದಿವಸ ಸಾಯಂಕಾಲ ತಾಯಿನಾಡು ಮತ್ತು ಡೇಲಿನ್ಯೂಸ್ ಪತ್ರಿಕೆಗಳ ಸ್ಥಳೀಯ ಏಜಂಟರಾದ ಶ್ರೀ ಎಂ. ಸಿದ್ಧರಾಮಯ್ಯನವರು ತಮ್ಮ ಏಜನ್ಸಿ ಆಫೀಸಿನಲ್ಲಿ ವ ಹಾಗಣವತಿ ಮಂಗಳಾರತಿಯನ್ನು ವೈಭವದಿಂದ ನೆರವೇರಿಸಿದರು.

o o

ಲಂಡನ್ ಸೆ 25— ಜಪಾನ್ ಚಕ್ರವರ್ತಿ ಹಿರೋಹಿಟೋರ ಸ್ವಂತ ಐಶ್ವರ್ಯ ಮತ್ತು ಕೈಗಾರಿಕೆ ಸಂಸ್ಥೆಗಳಲ್ಲಿ ಅವರಿಗೆ ಸೇರಿರುವ ಸಂಪತ್ತನ್ನು ಒಬ್ಬ ಸಂಯುಕ್ತ ಅಮೇರಿಕಾದ ನಿಪುಣನು ಪರಿಶೋಧಿಸಲಿರುವನೆಂದು ಹೇಳಲಾಗಿದೆ.

o o

ಬೊಂಬಾಯಿ— ಈ ಚಿನ ವಾರ್ತೆಯಂತೆ ಬೊಂಬಾಯಿನ ಗಲಭೆಯಲ್ಲಿ 17 ಮಂದಿಗೆ ಸಾವೂ, 72 ಮಂದಿಗೆ ಒಳಪೆಟ್ಟೂ ಆಗಿರುವರು. ದಂಗೆ ಸಂಬಂಧವಾಗಿ ಮಿಲಿಟರಿಯವರು ಕರಸಲ್ಪಟ್ಟಿದ್ದಾರೆ.

o o

ಪೂರಿ— ಇಲ್ಲಿ ನೆರೆಹಾವಳಿ ಹೆಚ್ಚಿ 19 ಹಳ್ಳಿಗಳು ನೀರಿನಿಂದ ಆವರಿಸಲ್ಪಟ್ಟಿವೆ. ದೋಣಿಗಳಲ್ಲಿ ಓಡಾಟವಾಗಿದೆ.

o o

ಭಾರತಕ್ಕೆ ಮೊದಲು ಸ್ವಾತಂತ್ರ್ಯ ಘೋಷಿಸಬೇಕೆಂದು ಫೆನ್ನರ್‌ಬ್ರಾಕ್ವೆಯವರು ಆಟ್ಲಿಯವರನ್ನು ಒತ್ತಾಯ ಪಡಿಸಿರುವರು.

ಸವರ್ಡ್ 1 ಕ್ಕೆ	ರೂ. 51-12-0
ಚಿಪ್ಪು ತೊಲ 1 ಕ್ಕೆ	77-4-0
ಬೆಳ್ಳಿ	1-7-0

ಲಂಚಕ್ಕಾಗಿ ಗುಮಾಸ್ತೆಗೆ ಶಿಕ್ಷೆ

ಕಲ್ಕತ್ತಾ ಸೆ 28— ಕಲ್ಕತ್ತಾದ ಕಂಟ್ರೋಲರ್ ಆಫ್ ಸಪ್ಲೈಸ್ ಆಫೀಸಿನ ಸೀನಿಯರ್ ಗುಮಾಸ್ತೆ ಅಟಿಕುಲ್ಲಾ ಎಂಬವರು ರೂ. 2000 ಲಂಚವಾ ತೆಗೆದುಕೊಂಡದ್ದಕ್ಕಾಗಿ 2 ವರ್ಷ ಕಠಿಣ ಸಜಾ, ರೂ. 2000 ದಂಡ ದಂಡ ಕೊಡಿಲು ತಪ್ಪಿದಲ್ಲಿ ಇನ್ನೂ 9 ತಿಂಗಳು ಕಠಿಣ ಸಜಾ ವಿಧಿಸಲಾಯಿತು. ಅವತಿದಿತರು ಮುಜುಂದಾರರೆಂಬುವರಿಂದ ರೂ. 4000 ಲಂಚ ಪಡೆಯಲು ಮಾತಾಡಿ, ಅದರಲ್ಲಿ 2000 ರೂ. ಮುಂಗಡವಾಗಿ ಪಡೆದರು. ಮುಜುಂದಾರರು ಸಂಗತಿಯನ್ನು ಪೋಲೀಸಿಗೆ ತಿಳಿಸಿ, ಗುರ್ತು ಮಾಡಿದ ನೋಟುಗಳನ್ನು ತೆಗೆದುಕೊಳ್ಳುವಾಗ ಅಟಿಕುಲ್ಲಾರವರನ್ನು ಪೋಲೀಸ್ ಅಧಿಕಾರಿಗಳಿಂದ ಹಿಡಿಸಿ ವಿಚಾರಣೆಗೆ ಗುರಿಪಡಿಸಿದರು.

(ಮೊದಲನೇ ಕಾಲಂನಿಂದ)

ಹೊಂತು ಅವರ ತಪ್ಪಲ್ಲ ಇನ್ನಾದರೂ ನವ ಗೆ ಬುದ್ಧಿ ಬರಬಹುದಲ್ಲವೇ?

ಈಗ ಈ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೂ, ಮತ್ತು ಆ ಪುಸ್ತಕವನ್ನು ಬರೆದಾತನ, ಮುದ್ರಕನ ಹಾಗೂ ಪ್ರಕಾಶಕನ ಮೇಲೂ ಒಂದು ಲಕ್ಷ ರೂಪಾಯಿಗಳ ಮಾನನಷ್ಟದ ಪರಿಹಾರಕ್ಕೂ ಸಹಾ ಶ್ರೀ ಶಿವಾಜಿ ನೆಮೊರಿಯಲ್ ಲೀಗಿನವರು ಜೌಹರ್‌ಪುರದ ಡಿವಿಲ್ ಕೋರ್ಟಿನಲ್ಲಿ ದಾವಾಮಾಡಿರುತ್ತಾರೆ. ಇದರ ಬೆಂಬಲಕ್ಕಾಗಿ ಡಾ॥ಎಸ್. ಪಿ. ಮುಖರ್ಜಿ ಡಾ॥ ಎಂ. ಆರ್. ಜಯಕರ್, ಆರ್.ಪಿ. ರಾಜರಾಜೇಂದ್ರ ಎಂ. ಎಲ್. ಶೀತೋಳೆಸಾಹೇಬ, ಮಿಹಿರ ಚಂದ್ರಾಧೀಮರ್ಜಿ, ಬೇರಿಸ್ಟರ್ ಮಾನಸಿಂಗ್ ರಾಜಕುಮಾರ್ ಮುಂತಾದ ಮುಖಂಡರು ಕಂಕಣ ಬದ್ಧರಾಗಿ ನಿಂತಿದ್ದಾರೆ.

ಇವರಂತೆಯೇ ನಮ್ಮ ಕರ್ನಾಟಕ ಪ್ರಾಂತ್ಯದವರು ಈ ವ್ಯಾಜ್ಯಕ್ಕೆ ಬೆಂಬಲ ವನ್ನಿತ್ತರೆ ಉತ್ತರೋತ್ತರ ಪುಂಡಾಟಗಳಡಗುವುದಲ್ಲದೆ ನಮ್ಮ ಕರ್ನಾಟಕದ ಹಿಂದೂಗಳಿಗೂ ಭೂಷಣವೂ ಶ್ರೇಯಸ್ಕರವೂ ಸಹಾ ಆಗುವುದರಲ್ಲಿ ಸಂದೇಹವಿಲ್ಲ.

ಈ ವೃತ್ತಾಂತವನ್ನು ಕರ್ನಾಟಕ ಪತ್ರಿಕಾ ಸಂಪಾದಕರೆಲ್ಲರೂ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಿ ಹಿಂದೂ ಸಮಾಜಕ್ಕೆ ಉಪಕಾರವನ್ನು ಮಾತಬೇಕೆಂದು ಕೋರಿದೆ. (ತಾ॥ 10-9-45 ರ ಪ್ರಜಾಮಿತ್ರ ಮುರಾಠಿ ಪತ್ರಿಕೆಯಿಂದ)

ಎಂ. ಆರ್. ಹನುಮಂತಶಾಸ್ತ್ರಿ

(ನ ಸಂ) ಬೆಂಗಳೂರು

ಸಿಂಗಪುರದಲ್ಲಿ ಭಾರತ ದಳಗಳ ಪರಾಕ್ರಮ

ಮೈಸೂರು ಪಟಾಲಮ್ಮಿನ ಪ್ರಶಂಸೆ

ಸಿಂಗಪುರ ಸೆ 23— 1942 ನೇ ಫೆಬ್ರವರಿಯಲ್ಲಿ ನಡೆದ ಸಿಂಗಪುರದ ಕೊಸೆಯ ಕದನದಲ್ಲಿ ಭಾ. ದಳಗಳು ಎಷ್ಟು ಧೈರ್ಯದಿಂದ ಕಾದಿದುವೆಂಬುದನ್ನು ಬಿಡುಗಡೆಯಾಗಿ ಬಂದಿರುವ ಭಾ. ಸೈನ್ಯಾಧಿಕಾರಿಗಳಿಂದ ತಿಳಿದುಕೂಳ ಬಹುದು. ಹಲವು ದಳಗಳು ಮೊದಲನೇ ಸಲ ಯುದ್ಧಕ್ಕೆ ತೊಡಗಿದುವು. ಕೆಲವಕ್ಕೆ ಯುದ್ಧವೆಂದರೆ ಗೊತ್ತೇ ಇಲ್ಲ. ಆದರೂ ಅವು ನವೀನ ಯಂತ್ರ ತಂತ್ರಗಳನ್ನು ಎದುರಿಸಬೇಕಾಯಿತು. ಬೀಡು ಬಿಟ್ಟೊಡನೆ ಭಾ. ದಳಗಳ ಮೇಲೆ ಗುಂಡಿನ ಸುರಿಮಳೆ ; ಶತ್ರುಗಳ ಹೊಡೆತ. ಅಗ ಸ್ವಲ್ಪ ಹಿಮ್ಮೆಟ್ಟಲೂ ಬೇಕಾಯಿತು. ಕೆಲವು ನೇಳೆ ದಳಗಳು ಯುದ್ಧ ಹೂಡುತ್ತಿರುವಾಗ ದಳದ ಕೇಂದ್ರವು ಮುಂದೆ ಇರುತ್ತಿತ್ತು.

ಕಢಾ ಎಂಬೆಡೆಯಲ್ಲಿ ವಿಮಾನ ನಿಲ್ದಾಣವನ್ನು ರಕ್ಷಿಸಲು ಮೈಸೂರಿನ 1 ನೇ ಪದಾತಿ ಪಟಾಲಮಿನವರು ಘೋರ ಯುದ್ಧ ಮಾಡಿದರು. ಅಮೇಲೆ ಸಿಂಗಪುರದಲ್ಲಿ ವಿಶ್ರಾಂತಿ ಪಡೆದು, ಜೋಹೋರಿನಲ್ಲಿ ಪೆನೆರಂಗ್ ಕೋಟೆಯ ರಕ್ಷಣೆಗೆ ಹೊರಟರು- ಆಗ ಅವರ ಸಾಹಸವನ್ನು ಮೆಚ್ಚಿ ವಿಶೇಷ ಸೈನ್ಯಾಧಿಕಾರಿಯೊಬ್ಬರು 'ಈ ಸೈನಿಕರು ಅತಿ ಶ್ರೇಷ್ಠರು' ಎಂದರು.

ಹೀಗೆಯೇ ಮಿತ್ರ ಪಡೆಗಳೂ ಕಾದಿದುವು ; ತಮ್ಮ ಗಾಯಗೊಂಡವರನ್ನೆಲ್ಲಾ ಶತ್ರುವಶಮಾಡದೆ ಸಾಗಿಸಿಕೊಂಡು ಬರಲಾಯಿತು. ಹಲವು ಶಾಖೆಗಳಲ್ಲಿ ಘೋರ ಯುದ್ಧ ನಡೆಯುತು. ಭಾ. ಪಡೆಗಳ ಸಜ್ಜನೀಕೆಯನ್ನು ಸಿಂಗಪುರದ ಕೋಸೆಯ ಕಮ್ಯಾಂಡರು ಮೆಚ್ಚಿ ಕೊಂಡಾಡಿದರು. (ಐ. ಪಿ.)

ಉಡುಪುಗಳನ್ನು ಅತಿ ಚೊಕ್ಕಟವಾಗಿ ಒಗೆದು

— ಶುಭ್ರಮಾಡುವ ಸಾಧಕ —

ಮೈಸೂರು ಸಾಬೂನನ್ನು ಉಪಯೋಗಿಸಿದ ಹೊರತು, ಆಶ್ಚರ್ಯಕರವಾದಷ್ಟು ಮಟ್ಟಿಗೆ ಆದರಲ್ಲಿ ಅಡಗಿರುವ ನಿರ್ಮಲೀಕರಣಶಕ್ತಿಯನ್ನು ತಿಳಿಯಲಾರಿರಿ ;

ಈ ಸಾಬೂನನ್ನು ಇವತ್ತು ಉಪಯೋಗಿಸಿ ನೋಡಿ ;

ಆದರ ಪ್ರತಿಫಲವನ್ನು ಕಂಡು ನೀವೇ ಬೆರಗಾಗುವಿರಿ.

ಮೈಸೂರು ಸಾಬೂನು

ಕೊಳಕು ಬಟ್ಟೆಗಳನ್ನು ಸ್ವಚ್ಛಗೊಳಿಸುವುದು

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು

☞ EVENING SHOWS

From 26-9-45

AT Opera—

Ali Baba &

Forty Thieves

(in Technicolor)

Featuring—

MARIA MONTEZ

JON HALL

TURHAN BEY

Daily 3 Shows

At Ranjit

Humayun

4 ನೇ ವಾರ

ರಣಜಿತ್ ಟಾಕೀಸಿನಲ್ಲಿ

.... ಹುಮಾಯೂನ್....

(ಹಿಂದಿ)

ಅಶೋಕ ಕುಮಾರ್, ಚಂದ್ರಮೋಹನ್

ವೀಣಾ, ನರ್ಗಿಸ್, ಷಾ ನವಾಸ್

ಪಾತ್ರವಹಿಸಿರುವರು

For Good Printing

L. N. Press

Sriramp at MYSORE



ಐ. ಜೆ. ಹಾಲ್

ಶಾವೇ ಬೀದಿ — ಮೈಸೂರು

Edited, Printed and published by M. S. Kris na Rao, at the Satvavadi Press, Chamaraja Agrahar, Mysore

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ